ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್ ಎನ್ ಎಸ್ - 19

3ನೇ ವರ್ಷ 44ನೇ ಸಂಚಿಕೆ ಕೊಪ್ಪ 4-8-1985 ಭಾನುವಾರ ಬೆಲೆ 20 ಪೈಸೆ

ಕೊಪ್ಪ ಮೂಲಕ ಹೊಸದಾಗಿ
3 ಸರ್ಕಾರಿ ಬಸ್ಸುಗಳ ಓಡಾಟ

ಕೊಪ್ಪ: ಈಚೆಗೆ ಹೊಸದಾಗಿ 3 ಸರ್ಕಾರಿ ಬಸ್‌ಗಳು ಕೊಪ್ಪದ ಮೂಲಕ ಓಡಾಡ ತೊಡಗಿದ್ದು, ಈಚಿನ ಕಾನೂನು ರೀತ್ಯ ಅವುಗಳಿಗೆ ಯಾರೂ 'ಸ್ಟೇ' ತರಲು ಸಾಧ್ಯವಿಲ್ಲವೆನ್ನಲಾಗಿದೆ.

ನ.ರಾ.ಪುರ-ಮೈಸೂರು ಬಸ್ಸು ಬೆಳಿಗ್ಗೆ 7 ಕ್ಕೆ ಕೊಪ್ಪಕ್ಕೆ ಬಂದು ಚಿಕ್ಕಮಗಳೂರು ಮೂಲಕ ಮೈಸೂರಿಗೆ ಹೋಗುತ್ತದೆ. ಸಂಜೆ 6 ಗಂಟೆಗೆ ಕೊಪ್ಪಕ್ಕೆ ಬಂದು ನ. ರಾ. ಪುರದಲ್ಲಿ ನಿಲ್ಲುತ್ತದೆ. ಆದರೆ ಈ ಬಸ್ಸು ನ. ರಾ. ಪುರದಿಂದ ಚಿಕ್ಕಗ್ರಹಾರದ ಮೂಲಕ ನೇರವಾಗಿ ಬಾಳೆಹೊನ್ನೂರಿಗೆ ಹೋಗುವುದೆಂದೂ ಆ ಮಾರ್ಗದಲ್ಲಿ ಒಂದು ಸೇತುವೆ ಶಿಥಿಲವಾಗಿರುವುದರಿಂದ ಕೊಪ್ಪದ ಮಾರ್ಗದಲ್ಲಿ ಓಡಾಡುತ್ತಿದೆಯೆಂದೂ ಹೇಳಲಾಗಿದೆ.

ಇನ್ನೊಂದು ಬಸ್ಸು ಬೆಳಿಗ್ಗೆ 7 ಗಂಟೆಗೆ ಆಗುಂಬೆಯಿಂದ ಹೊರಟು 8 ಗಂಟೆಗೆ ಕೊಪ್ಪಕ್ಕೆ ಬಂದು ನ.ರಾ. ಪುರ, ತರೀಕೆರೆ ಮಾರ್ಗವಾಗಿ ಮೈಸೂರಿಗೆ ಹೋಗುತ್ತದೆ. ಬೆಳಿಗ್ಗೆ 7 ಗಂಟೆಗೆ ಮೈಸೂರು ಬಿಟ್ಟು ಸಂಜೆ 3 ಗಂಟೆಗೆ ಕೊಪ್ಪದ ಮೂಲಕ ಆಗುಂಬೆಗೆ ತಲುಪುತ್ತಿದೆ.

ಶಿವಮೊಗ್ಗ-ಆದಿಚುಂಚನಗಿರಿ ಬಸ್ಸು ಬೆ. 6 ಕ್ಕೆ ಶಿವಮೊಗ್ಗದಿಂದ ತೀರ್ಥಹಳ್ಳಿ, ದೇವಂಗಿ, ಕೊಪ್ಪ (7 ಗಂಟೆ). ಚಿಕ್ಕಮಗಳೂರು, ಕಡೂರು, ತಿಪಟೂರು, ತುರುವೇಕೆರೆ, ಬೆಳ್ಳೂರು ಮಾರ್ಗವಾಗಿ ಆದಿಚುಂಚನಗಿರಿ ತಲುಪಿ (ಮಧ್ಯಾಹ್ನ 3.45), ಅಲ್ಲಿಂದ ಚನ್ನರಾಯಪಟ್ಟಣ ಮಾರ್ಗವಾಗಿ ಹಾಸನದಲ್ಲಿ (ಸಂಜೆ 6 ಗಂಟೆ) ತಂಗುತ್ತದೆ. ಅಲ್ಲಿಂದ ಬೆ. 9ಕ್ಕೆ ಹೊರಟು ಆದಿಚುಂಚನಗಿರಿ ಮೂಲಕ ಇದೇ ಮಾರ್ಗವಾಗಿ ರಾತ್ರಿ 7.30 ಕ್ಕೆ ಕೊಪ್ಪಕ್ಕೆ ಬಂದು ರಾತ್ರಿ 10 ಕ್ಕೆ ಶಿವಮೊಗ್ಗ ತಲುಪುತ್ತದೆ.

'ಕಾಮಧೇನು' ಸಗಣಿ ಅನಿಲ ಘಟಕಉದ್ಘಾಟನೆಸಮಾರಂಭ

ಶಾನುವಳ್ಳಿ: ಕೇವಲ 5 ಸಾವಿರ ರೂಪಾಯಿಯೊಳಗೆ ನಿರ್ಮಿಸಬಲ್ಲ 'ಕಾಮಧೇನು' ಸಗಣಿ ಅನಿಲ ಘಟಕದ ಈ ಪ್ರಾಂತ್ಯದ ಮೊಟ್ಟ ಮೊದಲ ಸ್ಥಾವರವನ್ನು ಇಲ್ಲಿನ ಹೆಚ್. ಆರ್. ಶೀನಪ್ಪ ನಾಯ್ಕರು ಕಟ್ಟಿಸಿದ್ದು, ಅದರ ಉದ್ಘಾಟನಾ ಸಮಾರಂಭ ಆ. 10 ರಂದು ಸಂಜೆ 5 ಗಂಟೆಗೆ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಸಚಿವ ಗೋವಿಂದ ಗೌಡ, ಜಿಲ್ಲಾಧಿಕಾರಿ ಮತ್ತು ವಿಶೇಷ ಜಿಲ್ಲಾಧಿಕಾರಿಗಳು ಮತ್ತು ಈ ಘಟಕಕ್ಕೆ ಹಣಕಾಸಿನ ಸೌಲಭ್ಯ ಒದಗಿಸಿರುವ ಚಿಕ್ಕಮಗಳೂರು-ಕೊಡಗು ಗ್ರಾಮೀಣ ಬ್ಯಾಂಕಿನ ಅಧ್ಯಕ್ಷ ಕೆ. ಅಚ್ಚುತ ಪೈ ಭಾಗವಹಿಸುತ್ತಾರೆ. 'ಕಾಮಧೇನು' ಮಾದರಿಯನ್ನು ವಿನ್ಯಾಸಗೊಳಿಸಿರುವ ಸಾಗರದ ಮಡಸೂರು ರಾಮಚಂದ್ರ ಅವರಿಗೆ ಸನ್ಮಾನವನ್ನೂ ಏರ್ಪಡಿಸಲಾಗಿದೆ.

ಕೊಪ್ಪ ಪುರಸಭೆ ಮಳಿಗೆಗಳ ಹರಾಜು : ಬಂಪರ್ ಶೇವಣಿ ಸಂಗ್ರಹ

ಕೊಪ್ಪ: ಇಲ್ಲಿನ ಬಸ್ ಸ್ಟಾಂಡಿನಲ್ಲಿರುವ ಪುರಸಭೆಯ 10 ಮಳಿಗೆಗಳ ಹರಾಜು ಜು. 28 ರಂದು ನಡೆದು 1 ಲಕ್ಷ ರೂ. ಬಂಪರ್ ಶೇವಣಿ ಸಂಗ್ರಹವಾಯಿತು.

ಮಳಿಗೆಗಳ ಬಾಡಿಗೆ ಸಹ ವಿಪರೀತವಾಗಿ ಏರಿ ಕನಿಷ್ಠ 790 ರಿಂದ ಗರಿಷ್ಠ 950 ರೂ. ಗಳವರೆಗೂ ಬಿಡ್ ಆಯಿತು ಬಿಡ್‌ದಾರರಿಂದ ತಲಾ 10 ಸಾವಿರ ರೂ.ಗಳ ಶೇವಣಿಯನ್ನು ಸ್ಥಳದಲ್ಲೇ ಸಂಗ್ರಹಿಸಲಾಯಿತು.

ಈ ಬಾರಿ ಬಾಡಿಗೆ ಹಕ್ಕನ್ನು ಈವರೆಗಿದ್ದ 3 ವರ್ಷದಿಂದ 5 ವರ್ಷಗಳಿಗೆ ಏರಿಸಲಾಗಿದೆ. ಹಿಂದಿನ ಬಾಡಿಗೆದಾರರ ಪೈಕಿ ನಾರಿದಾಸ್ ಜೈನ್ ಒಬ್ಬರು ಮಾತ್ರ ಹಳೇ ಬಾಕಿ 15,000 ರೂ.ಗಳನ್ನು ಕಟ್ಟಿ ಮತ್ತೊಮ್ಮೆ ಹರಾಜಿನಲ್ಲಿ ಭಾಗವಹಿಸಿದ್ದರು. ಈ ಮಳಿಗೆಗಳಲ್ಲಿ ಗ್ಯಾರೇಜ್, ಕ್ಯಾಂಟೀನ ನಡೆಸುವುದನ್ನೂ ಮೀನು, ಮಾಂಸ ಮತ್ತು ಶಸ್ತ್ರಾಸ್ತ್ರಗಳ ಮಾರಾಟವನ್ನೂ ನಿಷೇಧಿಸಲಾಗಿದೆ.

ಶಿವಮೊಗ್ಗ ಅಡಿಕೆ ಪೇಟೆ : ವೈವಾಟಗೆ ಮಾಮ್ಕೋಸ್‌ಸಿದ್ಧ

ಶಿವಮೊಗ್ಗ: ಇಲ್ಲಿನ ಅಡಿಕೆ ಮಂಡಿಗಳು ವಹಿವಾಟು ನಿಲ್ಲಿಸಿರುವ ಹಿನ್ನೆಲೆಯಲ್ಲಿ ಮಾಮ್ಕೋಸ್ ಮತ್ತು ಕ್ಯಾಂಪ್ಕೊ ಸಹಕಾರ ಸಂಸ್ಥೆಗಳು ಕೂಡಿ ಅಡಿಕೆ ವ್ಯಾಪಾರವನ್ನು ಮುಂದುವರಿಸಿವೆ. ಎಲ್ಲಾ ಮಂಡಿಗಳಲ್ಲೂ ವ್ಯಾಪಾರಕ್ಕೆ ಎ.ಪಿ.ಎಂ.ಸಿ.ಯವರು ವ್ಯವಸ್ಥೆ ಮಾಡಿದರೆ ಈ ಸಂಸ್ಥೆಗಳು ಸಿದ್ಧವಿದ್ದು, ರೈತರಿಗೆ ಒಳ್ಳೆಯ ಬೆಲೆಯನ್ನು ಕೊಡಲೂ ಸಿದ್ಧವಿವೆ. ಬೇರೆ ಮಂಡಿಗಳ ಮುಖಾಂತರ ವ್ಯವಹಾರಕ್ಕೆ ತೊಂದರೆಯಾದಲ್ಲಿ ಮಾಮ್ಕೋಸ್ ಮೂಲಕ ವಹಿವಾಟು ನಡೆಸಬಹುದು ಎಂಬುದಾಗಿ ಮಾಮ್‌ಕೋಸ್ ಕಾರ್ಯದರ್ಶಿ ತಿಳಿಸಿದ್ದಾರೆ.

ಕೊಪ್ಪ ಬಂದ್: ರಾಜಕೀಯ ನೆಲೆಗಾಗಿ 'ನಿರಾಶ್ರಿತರ' ಪರದಾಟ: ಕಪ್ಪು ಕೃತ್ಯಗಳ ಮರೆಮಾಚಲು 'ನಾಗರಿಕ ಸಮಿತಿ'ಯೆಂಬ ತೆರೆ

ಕೊಪ್ಪದ ನಾಗರೀಕರು ಎದುರಿಸುತ್ತಿರುವ ಸಮಸ್ಯೆಗಳಿಗೆ ಲೆಕ್ಕವಿಲ್ಲ. ನೀರಿನ ಸಮೃದ್ಧಿಯ ಈ ಕಾಲದಲ್ಲೂ ಶುದ್ಧವಾದ ಕುಡಿವ ನೀರಿಲ್ಲ. ಇಲ್ಲಿ ಪೂರೈಕೆಯಾಗುವ ನೀರು ಹಲವು ಕಾಯಿಲೆಗಳಿಗೆ ಕಾರಣವಾಗಿದೆಯೆಂದು ಇಲ್ಲಿನ ವೈದ್ಯ ಸಮೂಹ ಅಭಿಪ್ರಾಯಪಟ್ಟಿದೆ. (ಅದರ ಮೇಲೆ ಪುರಸಭೆ ಮನೆಗಳಿಗೆ ನಲ್ಲಿಯ ಮೀಟರ್ ಹೇರಲು ಹೊಂಚು ಹಾಕುತ್ತಿದೆ.) ಸರ್ಕಾರಿಆಸ್ಪತ್ರೆಗೆ ಮಹಿಳಾ ವೈದ್ಯರಿಲ್ಲ. ಶಾಲೆ ಕಾಲೇಜುಗಳಲ್ಲಿ ಅಧ್ಯಾಪಕರಿಲ್ಲ. ಕಿರಿಯ ಕಾಲೇಜು ಮತ್ತು ಪ್ರೌಢಶಾಲೆಗೆ ಸಾಕಷ್ಟು ಕಟ್ಟಡವಿಲ್ಲದೆ ಸರದಿಯಂತೆ ಅರ್ಧರ್ಧ ದಿನದ ತರಗತಿಗಳು. ಪ್ರಥಮದರ್ಜೆ ಕಾಲೇಜಿನಲ್ಲಿ ಶೈಕ್ಷಣಿಕ ಅಗತ್ಯಗಳು ಒಂದೂ ಪೂರೈಸಿಲ್ಲ. ಜನರಿಗೆ ದಿನಬಳಕೆ ವಸ್ತುಗಳ ಪೂರೈಕೆ ಸುಸೂತ್ರವಿಲ್ಲ. ಅಂಗಡಿಗಳಲ್ಲೂ ಸಂತೆಯಲ್ಲೂ ಪದಾರ್ಥಗಳ ಗುಣಮಟ್ಟ ಮತ್ತು ತೂಕದಲ್ಲಿ ಬಹಳ ಕಡೆ ಅನ್ಯಾಯವಾಗುತ್ತಿದೆ. ಸುತ್ತಮುತ್ತ ಸಾರಿಗೆ ಸೌಕರ್ಯ ಚೆನ್ನಾಗಿಲ್ಲ....ಒಂದೇ, ಎರಡೇ.

ಈ ಎಲ್ಲ ಸಮಸ್ಯೆಗಳ ನಿವಾರಣೆಗೆ ಸಾಮೂಹಿಕ ಪ್ರಯತ್ನವನ್ನಾಗಲೀ ಚಳುವಳಿಯನ್ನಾಗಲೀ ಮಾಡುವವರು ಗತಿಯಿಲ್ಲ (ಪ್ರಬೋಧಿನಿ ಮಾತ್ರಮಂಡಳಿಯ ಹೊರತು.) ಆದರೆ ಇದ್ದಕ್ಕಿದ್ದಂತೆ 'ಕೊಪ್ಪ ನಾಗರೀಕ ಸಮಿತಿ'ಯೋ 'ನಾಗರೀಕ ಕ್ರಿಯಾ ಸಮಿತಿ'ಯೋ ಎಂಥದೋ ಒಂದು ಹುಟ್ಟಿಕೊಂಡು, ಒಬ್ಬ ಸಬ್ ಇನ್‌ಸ್ಪೆಕ್ಟರ ವರ್ಗಾವಣೆಯನ್ನು ವಿರೋಧಿಸಿ ಜು. 29 ರಂದು ಕೊಪ್ಪವನ್ನೇ ಬಂದ್ ಮಾಡಿಸಿಬಿಡುತ್ತದೆ!

'ನಾಗರೀಕತೆ'

ನಾಗರೀಕ ಸಮಿತಿ ಎಂಬುದೊಂದನ್ನು ಮಾಡಬೇಕಾದರೆ ಊರಿನ ಎಲ್ಲಾ ವೃತ್ತಿಗಳ, ಎಲ್ಲಾ ರಂಗಗಳ ನಾಗರೀಕರನ್ನು ಸಭೆ ಸೇರಿಸಿ, ಸಮಸ್ಯೆ ಏನು, ಅದರ ನಿವಾರಣೆಗೆ ಏನು ಕ್ರಮ ತೆಗೆದುಕೊಳ್ಳಬೇಕು— ಎಂದೆಲ್ಲ ಚರ್ಚಿಸಲಾಯಿತೆ? ಸಮಿತಿಯನ್ನು ಈ ಸಭೆ ಆರಿಸಿತೆ? ಎಂಬ ಪ್ರಶ್ನೆಗಳಿಗೆಲ್ಲ ಇಲ್ಲಿ ಅರ್ಥವೇ ಇಲ್ಲ. ಇನ್ನೂ ಕೇಳಿದರೆ, ಈ ಸಮಿತಿಯ ಅಧ್ಯಕ್ಷ, ಕಾರ್ಯದರ್ಶಿ ಮತ್ತಿತರ ಪದಾಧಿಕಾರಿಗಳು ಯಾರ್ಯಾರೆಂದು ಯಾರಿಗೂ ಗೊತ್ತಿಲ್ಲ, ಎಲ್ಲೂ ಯಾವ ಸಂದರ್ಭದಲ್ಲೂ ಅದನ್ನು ಪ್ರಕಟಿಸಿಲ್ಲ. ಒಂದೊಂದು ಸಲ ಒಬ್ಬೊಬ್ಬರ ಹೆಸರನ್ನು ಹೇಳಲಾಯಿತು. ಬಂದ್‌ನ ಕರೆ ಕೊಡಲು ಧ್ವನಿವರ್ಧಕಕ್ಕೆ ಪೋಲೀಸರ ಅನುಮತಿ ಪಡೆದಾಗಲೂ ಅವರಿಗೆ ಸಹ ಪದಾಧಿಕಾರಿಗಳ ವಿವರ ಕೊಟ್ಟಿಲ್ಲ.

ಜು. 25 ರಂದು ಇದೇ ವ್ಯಕ್ತಿಗಳು ಇಬ್ಬರು ಅಧಿಕಾರಿಗಳಿಗೆ ಬೀಳ್ಕೊಡಿಗೆ ಕೊಟ್ಟಾಗ 'ನಾಗರೀಕ ಸಮಿತಿ' ಎಂದಿದ್ದ ಹೆಸರು ಬಂದ್ ಕರೆ ಕೊಡುವಾಗ 'ನಾಗರೀಕ ಕ್ರಿಯಾ ಸಮಿತಿ' ಆಯಿತು. ಇದಕ್ಕೆ ಜನ ಬೆಂಬಲ ಇದೆಯೆಂದು ತೋರಿಸಲು ರಿಕ್ಷಾ ಮತ್ತು ಬಾಡಿಗೆ ಕಾರುಗಳ ಚಾಲಕ, ಮಾಲೀಕರನ್ನು ಸೇರಿಸಿಕೊಂಡರು. ಆದರೆ ತಮ್ಮನ್ನು ಬಲವಂತವಾಗಿ ಇದರೊಳಗೆ ಉಪಯೋಗಿಸಿಕೊಳ್ಳಲಾಯಿತೆಂದು ಹಲವು ಜನ ರಿಕ್ಷಾದವರು ಹೇಳುತ್ತಾರೆ. ಅಷ್ಟಾಗಿಯೂ ಬಂದ್ ದಿನ ಮೆರವಣಿಗೆಯಲ್ಲಿ ಹೋದದ್ದು ನಲವತ್ತಕ್ಕೂ ಕಮ್ಮಿ ಜನ. ತಾ|| ಕಚೇರಿ ಬಳಿ ಸಭೆ ಮುಗಿದಾಗ ಒಟ್ಟಾಗಿದ್ದುದು ಸುಮಾರು 80 ಜನ.

ಒಳ್ಳೆಯದೆಂಬುದು ಬಹಳ ಕಡಿಮೆ ಇರುವ ಹಾಗೂ ಬಹುತೇಕ ಎಲ್ಲಾ ತರದ ಕೆಡುಕಿನ ತಾಣವಾಗಿರುವ ಈ ಊರಿನಲ್ಲಿ ಈಚೆಗೆ ಹಲ್ಲೆಕೋರತನಕ್ಕೆ ಸಾರ್ವತ್ರಿಕವಾಗಿ ಮನ್ನಣೆ ದೊರಕಿಸುವ ವಿದ್ಯಮಾನಗಳು ಹೆಚ್ಚಿರುವುದು ಪ್ರಜ್ಞಾವಂತರೆಂದುಕೊಳ್ಳುವವರೆಲ್ಲ ಗಂಭೀರವಾಗಿ ಚಿಂತಿಸಬೇಕಾದ ವಿಚಾರ.

ರಾಜಕೀಯ ನೆಲೆಗಾಗಿ

ನಿಜವಾಗಿ ನಡೆದುದೇನೆಂದರೆ, ಗೋವಿಂದ ಗೌಡರ ವರ್ಚಸ್ಸಿನಿಂದ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದವರು, ಕಾಂಗ್ರೆಸ್ಸಿನಿಂದ ಎಲ್ಲೆಲ್ಲೋ ಆಗಿ ಜನತಾ ಪಕ್ಷಕ್ಕೆ (ಅಥವಾ ಅದರ ಹತ್ತಿರಕ್ಕೆ) ಬಂದವರು ಮುಂತಾದ ಮೂರ್ನಾಲ್ಕು ಜನರ ಮಿತ್ರಕೂಟ ಅಧಿಕಾರ-ಸ್ಥಾನಮಾನಗಳಿಗಾಗಿ ರೈತ ಸಂಘ, ಅಲ್ಲಿ ಇಲ್ಲಿ ಅಂತ ಹರಿದಾಡಿ. (1983 ರ ಚುನಾವಣೆಯಲ್ಲಿ ಜನತಾ ಪಕ್ಷಕ್ಕೆ ನಿಷ್ಠೆ; ಕಳೆದ ಲೋಕಸಭಾ ಚುನಾವಣೆಯ ಹೊತ್ತಿಗೆ "ಹೋ, ನಾವೆಲ್ಲ ಯಾವಾಗಲೋ ಜನತಾ ಬಿಟ್ಟಾಗಿದೆ" ಅಂತ ರೈತ ಸಂಘದ ಅಭ್ಯರ್ಥಿಯ ಹಿಂದೆ; ಅನಂತರದ ವಿಧಾನ ಸಭೆ ಚುನಾವಣೆಯಲ್ಲಿ ಮತ್ತೆ ಗೋವಿಂದ ಗೌಡರ ಹಿಂದೆ—ಹೀಗೆ ಇವರುಗಳ ಕೊನೆಯಿಲ್ಲದ ಸಂಚಾರ)

ಎಲ್ಲೂ ನೆಲೆ ಸಿಗದೆ ಒಂದು ಖಾಯಂ ನೆಲೆ ಕಂಡುಕೊಳ್ಳಲು ಹಾಗೂ ತಮ್ಮ ಈವರೆಗಿನ 'ಮಹತ್ಕಾರ್ಯ'ಗಳಿಗೆ ಒಂದು ಸಂಭಾವಿತ ತನದ ಮೆರುಗು-ಮಾನ್ಯತೆ ದೊರಕಿಸಿಕೊಳ್ಳಲು ಮಾಡಿದ ಪ್ರಯತ್ನವೇ ಈ ಎಲ್ಲ ವಿದ್ಯಮಾನ ಎಂಬುದು ಎಲ್ಲರಿಗೂ ಗೊತ್ತಾಗಿರುವ ಸಂಗತಿ.

ಆರೋಪಗಳು

ಆದರೆ ಇದಕ್ಕಿಂತ ಅಪಾಯಕಾರಿ ತಾತ್ವಿಕ ಹಿನ್ನೆಲೆಗಳಿರುವಂತೆ ಕಾಣಿಸಲು ಮಂತ್ರಿಗಳ ಮೇಲೆ ಮತ್ತು ಕೆಲವು ಅಧಿಕಾರಿಗಳ ಮೇಲೆ ಗಂಭೀರವೆನ್ನಿಸುವ ಕೆಲವು ಆರೋಪಗಳನ್ನು ಮಾಡುತ್ತಾರೆ. ದೊಂಬಿ, ಹತ್ಯೆ ನಡೆಸಿದ ಗುಂಪಿನ ಕುಡಿತದ ಪಾರ್ಟಿಯಲ್ಲಿ ಭಾಗವಹಿಸಿದ್ದನೆಂದು ತಿನ್ನೈ ಎಸ್ಪಿಯವರ

(ಎರಡನೆ ಪುಟಕ್ಕೆ)

ಕಪ್ಪು ಕೃತ್ಯಗಳ ಮರೆಮಾಚಲು 'ನಾಗರಿಕ ಸಮಿತಿ'ಯೆಂಬ ತೆರೆ

(ಒಂದನೆ ಪುಟದಿಂದ)

ವಿಚಾರಣಾ ವರದಿಯಿಂದ ವರ್ಗಾವಣೆಗೊಂಡ ಸಬ್ ಇನ್ಸ್‌ಪೆಕ್ಟರ್ ಶಶಿಕುಮಾರ್, ತಿಂಗಳುಗಟ್ಟಲೆ ಬೆಂಗಳೂರಲ್ಲಿ ಹಣಗಾಡಿ ವರ್ಗ ಮಾಡಿಸಿಕೊಂಡ ಸರ್ಕಲ್ ಇನ್ಸ್‌ಪೆಕ್ಟರ್ ಪಂಚಾಕ್ಷರಿ ಸ್ವಾಮಿ, ಇಲಾಖಾ ನಿರ್ದೇಶಕರ ತನಿಖೆಯಿಂದಾಗಿ ಸ್ಥಳದಲ್ಲೇ ಅಮಾನತುಗೊಂಡ ತೋಟಗಾರಿಕೆ ಸಹಾಯಕ ನಿರ್ದೇಶಕ ವಿಶ್ವನಾಥಯ್ಯ—ಇವರುಗಳನ್ನೆಲ್ಲ ಭಾರಿ ದಕ್ಷ, ಪ್ರಾಮಾಣಿಕ ಅಧಿಕಾರಿಗಳೆಂದು ಹೊಗಳುತ್ತಾರೆ. "ಮಂತ್ರಿಗಳ ಜಾತಿ ರಾಜಕೀಯ ಮತ್ತು ಅಧಿಕಾರಿಗಳ ಗುಂಪುಗುಳಿತನಗಳಿಂದ ಬೇಸತ್ತ ನಾಗರಿಕರು ಬಂದ್ ಆಚರಿಸಿದ್ದಾಗಿ" ಅವರು ಹೇಳಿಕೊಳ್ಳುತ್ತಾರೆ.

(ಈ ಇಬ್ಬರು ಪೋಲೀಸ್ ಅಧಿಕಾರಿಗಳೂ ಎಷ್ಟು ದಕ್ಷರು, ಪ್ರಾಮಾಣಿಕರು ಎಂಬುದು ಊರಿಗೆಲ್ಲ ಗೊತ್ತಿದೆ. ಡ್ರೈವರ್‌ಗಳ ಅರ್ಹತೆ ಅಥವಾ ಲೈಸೆನ್ಸ್ ತಪಾಸಿಸಲು ಹೋಗದೆ ಮಾಮೂಲಿ ಪಡೆದುಕೊಂಡು, ಪುಂಡರಿಗೆಲ್ಲ ಪುರಾಣ ಹೇಳಿಕೊಂಡು ಇದ್ದವರೆಲ್ಲ ಬಹಳ ಒಳ್ಳೆಯವರು! ಒಬ್ಬ ಗಣ್ಯ ನಾಗರಿಕರು ಹೇಳುತ್ತಾರೆ: "ಇಲ್ಲಿ ಪೋಲೀಸ್ ಇಲಾಖೆಯೊಂದಿದೆ ಎಂಬುದೇ ನಮಗೆ ಅನಿಸುತ್ತಿರಲಿಲ್ಲ" ಎಂದು. ಜನರಿಗೆ ಪೋಲೀಸ್ ಇಲಾಖೆಯ ಜ್ಞಾಪಕ–ಬರೀ ಜ್ಞಾಪಕ ಮಾತ್ರ–ಬರುತ್ತಿದ್ದುದು ಪದೇ ಪದೇ ಊರಲ್ಲಿ ಮತ್ತು ಸುತ್ತಮುತ್ತ ಕಳ್ಳತನಗಳಾದಾಗ ಅಥವಾ ಯಾರಾದರೂ ಪೋಲೀಸ್ ಸಿಬ್ಬಂದಿ ಹಾಡೇ ಹಗಲು ಕುಡಿದುಕೊಂಡೋ ಇನ್ನಾವ ರೀತಿಯಲ್ಲೋ ಸಾರ್ವಜನಿಕವಾಗಿ ಗಲಾಟೆ ಎಬ್ಬಿಸಿಕೊಂಡಾಗ.)

ಈ "ದಕ್ಷ, ಪ್ರಾಮಾಣಿಕ" ಅಧಿಕಾರಿಗಳನ್ನು ಗೋವಿಂದ ಗೌಡರು 'ತಮ್ಮ ಗುಂಪಿನ' ಕೆಲವು ಅಧಿಕಾರಿಗಳ 'ಜಾತಿ ರಾಜಕೀಯ'ದಿಂದಾಗಿ ವಿನಾಕಾರಣ ವರ್ಗ ಮಾಡಿಸಿದರೆನ್ನುತ್ತಾರೆ ಇವರುಗಳು. ಡಾ|| ಜಗದೀಶ್ ಮತ್ತು ಚೆನ್ನಪ್ಪ ಹೆಗ್ಡೆಯವರ ಮೇಲೆ ಸಾರ್ವಜನಿಕರ ದೂರುಗಳಿದ್ದು ಅವರನ್ನು ವರ್ಗಾಯಿಸಬೇಕಿತ್ತು ಎನ್ನುತ್ತಾರೆ. ಇವರಿಬ್ಬರ ಮಾತಿನಂತೆಯೇ ಗೋವಿಂದ ಗೌಡರು ಎಲ್ಲ ತೀರ್ಮಾನ ತೆಗೆದುಕೊಳ್ಳುವುದಂತೆ.

ಇವರುಗಳ ಮೇಲೆ ಯಾರು, ಏನೆಂದು ದೂರಿದ್ದಾರೆ? ಡಾಕ್ಟರು ತಾವು ಲಂಚ ತೆಗೆದುಕೊಳ್ಳದಿರುವುದು ಮಾತ್ರವಲ್ಲ, ಇಡೀ ಆಸ್ಪತ್ರೆಯಲ್ಲಿ ಯಾರೂ ಲಂಚ ತೆಗೆದುಕೊಳ್ಳಲು ಅವಕಾಶ ಇಲ್ಲದಂತೆ ಮಾಡಿದ್ದರು; ಇಡೀ ದಿನ, ಅಗತ್ಯವಿದ್ದಾಗ ರಾತ್ರಿ ಕೂಡ–ಆಸ್ಪತ್ರೆಯಲ್ಲಿ ದುಡಿಯುತ್ತಾರೆ ಎಂತಲೆ? ಚೆನ್ನಪ್ಪ ಹೆಗ್ಡೆಯವರು ಗೋವಿಂದ ಗೌಡರ ಹೆಗಲಿಗೆ ಹೆಗಲು ಕೊಟ್ಟು ಇಡೀ ಕ್ಷೇತ್ರದಲ್ಲಿ ಈ 30 ವರ್ಷಗಳಲ್ಲಿ ಆಗದಿದ್ದಷ್ಟು ಕಾಮಗಾರಿಗಳು ಮಂಜೂರಾಗಲು ನೆರವಾಗಿದ್ದಾರೆ; ಆದರೆ ಆಗೆಲ್ಲ ಅವರು ಗೋಸುಂಬೆ ರಾಜಕಾರಣಿಗಳಿಗೆ ಚಿಕ್ಕಾಸಿನ ಬೆಲೆ ಕೊಟ್ಟಿಲ್ಲ ಎಂತಲೆ?

[ಈ ಇಬ್ಬರು ಅಧಿಕಾರಿಗಳು ಗೋವಿಂದ ಗೌಡರಿಗೆ ಬಹಳ ಆಪ್ತರಾಗುವುದಕ್ಕೆ, ಒಬ್ಬರು ಸ್ವತಃ ಗೋವಿಂದ ಗೌಡರಿಗೂ ಇನ್ನೊಬ್ಬರು ರಾಜ್ಯ ಜನತಾ ಅಧ್ಯಕ್ಷ ಎಂ. ಚಂದ್ರಶೇಖರ್‌ರಿಗೂ ಅತಿ ಹತ್ತಿರದ ಸಂಬಂಧಿಗಳಾಗಿರುವುದೂ ಒಂದು ಕಾರಣವಾಗಿರಬಹುದಾದರೂ, "ಭ್ರಷ್ಟತೆಯಿಲ್ಲದ ಅವರ ಪ್ರಜ್ಞಾವಂತ ಕರ್ತವ್ಯನಿಷ್ಠೆ ಇದಕ್ಕೆ ಕಾರಣ"ವೆಂದು ಗೌಡರ ನಿಕಟವರ್ತಿ ಮೂಲಗಳ ಹೇಳಿಕೆ.]

'ಸರಿ ಮಾಡುವ' ವರಸೆ!

ಒಂದು ವೇಳೆ ಹೆಗ್ಡೆ ಅಥವಾ ಜಗದೀಶ್ ತಪ್ಪು ಮಾಡಿದ್ದರೆ ಅದನ್ನು ವಿರೋಧಿಸುವುದು ಅಥವಾ ಅವರನ್ನು 'ಸರಿ ಮಾಡುವುದು' ರಾತ್ರಿ ಗ್ಯಾಂಗ್ ಕಟ್ಟಿ ಅವರ ಮನೆಗೆ ನುಗ್ಗಿ ಹಲ್ಲೆ ನಡೆಸುವುದರಿಂದಲೇ? ಸ||ಇ|| ಶಶಿಕುಮಾರ್ ಹೇಳುವಂತೆ "ಅವರು ಮಾಡಿದ್ದು ಸರಿ. ಇಲ್ಲವಾದರೆ, ಮಂತ್ರಿಗಳ ಹತ್ತಿರ ದೂರು ಹೇಳಿದರೂ ಏನೂ ಪ್ರಯೋಜನವಾಗುವ ಹಾಗಿಲ್ಲ ಎಂದ ಮೇಲೆ ಮತ್ತೆ ಹೇಗೆ ಅವರನ್ನು ಸರಿ ಮಾಡುವುದು?" ಆಗ ಬೇರಾವುದೇ ಪ್ರತಿಭಟನೆಯ ಮಾರ್ಗವಿಲ್ಲವೆನ್ನುವುದಾದರೆ, ಈಗ ಹೇಗೆ ಬಂದ್, ಮೆರವಣಿಗೆ ಮುಂತಾದ ಮಾರ್ಗಗಳು ಪ್ರಯೋಜನ ಕೊಡುತ್ತವೆ? ಅಂದರೆ, ಒಟ್ಟಾರೆ ಗಲಾಟೆ ಎಬ್ಬಿಸಬೇಕು, ಅಷ್ಟೇ ತಾನೆ ಇದರರ್ಥ?

ದಕ್ಷತೆ, ನಿಷ್ಠೆ, ಪ್ರಾಮಾಣಿಕತೆ!

ಈ ಪತ್ರಿಕರ್ತನ ಹತ್ತಿರ ತಮ್ಮ ಚೇಂಬರಿನಲ್ಲೇ ಶಶಿಕುಮಾರ್ ಹೇಳಿದ ಮಾತು ಈ ಮೇಲಿನದು. ಅಷ್ಟೇ ಅಲ್ಲ. "ಇನ್ನೂ ಇಬ್ಬರು ಇವರುಗಳ 'ಹಿಟ್ ಲಿಸ್ಟ್'ನಲ್ಲಿದ್ದಾರೆ. ತಹಸೀಲ್ದಾರ್ ಮತ್ತು ಸುಬ್ಬಯ್ಯ ಗೌಡ" "ಇದು ನಿಮಗೆ ಗೊತ್ತಿದ್ದೂ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ?" ಎಂದರೆ, "ನಾನೇನು ಕ್ರಮ ತೆಗೆದುಕೊಳ್ಳಬೇಕು? ಹಲ್ಲೆ ನಡೆದರೆ ಅಥವಾ ನನಗೆ ದೂರು ಬಂದರೆ ಏನು ಕ್ರಮ ತೆಗೆದುಕೊಳ್ಳಬೇಕೊ ತೆಗೆದುಕೊಳ್ಳುತ್ತೇನೆ." ತಾನು ಯಾರದೊ ಹಲ್ಲೆಯ ಒಲಿ ಪಟ್ಟಿಯಲ್ಲಿದ್ದೇನೆಂದು ಗೊತ್ತಿರಲಾರದವನೂ, ಅದು ಗೊತ್ತಿರುವ ಪೋಲೀಸರಿಗೆ ದೂರು ನೀಡಿದರೆ ಮಾತ್ರ ಕ್ರಮ!.... ನಾವೇನಾದರೂ ಸಾರ್ವಜನಿಕರ ಅಹವಾಲು ಒಯ್ದರೆ, "ಅವೆಲ್ಲ ಸಿವಿಲ್ ಡಿಸ್ಪ್ಯೂಟ್ಸ್. ನಮಗ್ಯಾಕೆ ಬೇಕು? ಅವರುಗಳು ಏನಾದರೂ ಮಾಡಿಕೊಳ್ಳಲಿ." ಸಿವಿಲ್ ಡಿಸ್ಪ್ಯೂಟ್‌ಗಳು ಕ್ರಿಮಿನಲ್ ಆಗುವವರೆಗೂ ಕಾಯಬೇಕು! ಇದೆಲ್ಲ ಇವರ ದಕ್ಷತೆ! ಹಲ್ಲೆಗಳ ಮುನ್ಸೂಚನೆ ಗೊತ್ತಿದ್ದೂ ನಿಷ್ಕ್ರಿಯರಾಗಿರುವುದು ಅಥವಾ ಅದಕ್ಕೆ ಸಹಕರಿಸುವುದು ಇವರ ನಿಷ್ಠೆ ಮತ್ತು ಪ್ರಾಮಾಣಿಕತೆ!

ಹಾಗೆಯೇ, ಒಬ್ಬ ಮನುಷ್ಯ ಕುಡಿದುಕೊಂಡು ಪ್ರವಾಸಿಮಂದಿರದ ಅಧಿಕಾರಿಯ ಬಳಿ "ವೆಂಕಟೇಶನಿಗೆ ಹೇಗೆ ಐ.ಬಿ. ಕೊಟ್ಟೆ? ನನಗೂ ಕೊಡು" ಎಂದು ಕೇಳಿದರೆ ಅದು ಅನ್ಯಾಯವನ್ನು ವಿರೋಧಿಸಿದಂತಾಯಿತೆ? ಅಥವಾ ಅನ್ಯಾಯ'ವೆದಿದ್ದರೆ ಅದರಲ್ಲಿ ತನಗೂ ಪಾಲು ಕೇಳಿದಂತಾಯಿತೆ? (ಹೆಚ್. ಜಿ. ವೆಂಕಟೇಶ್ ತಾನು ಯಾವತ್ತೂ ಐ.ಬಿ.ಯಲ್ಲಿ ಉಳಿದುಕೊಂಡಿಲ್ಲ. ತುಂಬಾ ಗಣ್ಯರಾದ ಅತಿಥಿಗಳು ಬಂದಿದ್ದರೆ, ಅವರಿಗೆ ಮಧ್ಯಾಹ್ನದ ಊಟ ಹಾಕಿಸುವಾಗ ಬೇರೆ ಒಳ್ಳೆಯ ರೂಮುಗಳಿಲ್ಲದಿದ್ದ ಪಕ್ಷದಲ್ಲಿ ಸ್ವಲ್ಪ ಹೊತ್ತು ಐ.ಬಿ. ಬಳಸಿಕೊಂಡಿರಬಹುದು ಆದರೆ ಅಲ್ಲಿ ಯಾವತ್ತೂ ಹೀಗೆಲ್ಲ ಅಸಭ್ಯವಾಗಿ ವರ್ತಿಸಿಲ್ಲ ಎನ್ನುತ್ತಾರೆ.)

'ನ್ಯಾಯಕ್ಕಾಗಿ ಹೋರಾಟ', 'ಅನ್ಯಾಯಕ್ಕೆಗಿ ಪ್ರತಿಭಟನೆ' ಕುರಿತು ಇಷ್ಟು ಸಾಕಲ್ಲವೆ?

ದಿವಾಳಿತನ

ಹೀಗೆ, ಇವರುಗಳು ತಮ್ಮ ಕೂಟಕ್ಕೆ ಮಾನ್ಯತೆ ಗಳಿಸಿಕೊಳ್ಳಲು ಹೆಣಗುತ್ತಿದ್ದರೆ, ಇವರಿಗೆ ದೊಡ್ಡದಾಗಿ ಬೆಂಬಲಿಸಿದ ರಾಜಕೀಯಸ್ಥರಿಗೆ ಏನು ಹೇಳಬೇಕು? ಬ್ಲಾಕ್ ಕಾಂಗ್ರೆ ಅಧ್ಯಕ್ಷ ಮಾಗ ಶ್ರೀನಿವಾಸ್ 'ಬೀಳ್ಕೊಡುಗೆ' ಸಮಾರಂಭದಲ್ಲಿ ಮಾತನಾಡಿದ ಶೈಲಿ, ಇಡೀ ಅವರ ಪಕ್ಷದ (ಕನಿಷ್ಠ ಈ ಕ್ಷೇತ್ರದಲ್ಲಿ) ದಿವಾಳಿತನಕ್ಕೆ ಕನ್ನಡಿ ಹಿಡಿದಂತಿತ್ತು. ಆಳುವ ಪಕ್ಷವನ್ನು ವಿರೋಧಿಸುವುದೆಂದರೆ ಅದಕ್ಕೊಂದು ತೂಕ, ಗಾಂಭೀರ್ಯ ಏನೂ ಬೇಡವೆ?

ಇವರದಕ್ಕಿಂತ ಹೆಚ್ಚಿನ ದಿವಾಳಿತನ ಜನತಾದವರು ಜು. 30ರಂದು ಏರ್ಪಡಿಸಿದ ಮೆರವಣಿಗೆ. ಬಂದ್, ಹಲ್ಲೆ ಮುಂತಾದುವನ್ನು ಪ್ರತಿಭಟಿಸಲು ಈ ಕ್ರಮವಂತೆ. ಅದಕ್ಕೂ ಒಂದು 'ನಾಗರೀಕ ಸಮಿತಿ' ಎಂದು ಹೆಸರಿಟ್ಟುಕೊಂಡಿದ್ದರು. ಇದು 'ತಾಲ್ಲೂಕ್ ಮಟ್ಟ'ದ್ದಂತೆ. ತಮ್ಮ ಪಕ್ಷದ ಹೆಸರಲ್ಲಾದರೂ ಮಾಡಲಿಲ್ಲ. ಕಸವೆಂದು ಕೊಡವಿಕೊಳ್ಳಬೇಕಾದುದಕ್ಕೆ ಇವರೇ ದೊಡ್ಡ ಮನ್ನಣೆ ಕೊಟ್ಟಂತೆ. "ಅವರ ಈ ಎಲ್ಲ ಕೃತ್ಯಗಳಿಗೆ ಏನೂ ಪ್ರತಿಭಟಿಸದಿದ್ದರೆ ಅವರು ಮಾಡಿದ್ದೇ ಜಯಿಸುತ್ತೆ ಎಂದುಕೊಂಡಾರು" ಎಂತಲಂತೆ. ಯಾಕೆ, ಸರ್ಕಾರ ಇವರದೇ ಅಲ್ಲವೆ? ಸಮಾಜಘಾತಕರನ್ನು ಬಗ್ಗು ಬಡಿಯಲು ಅದಕ್ಕೆ ಶಕ್ತಿಯಿಲ್ಲವೆ ಅಥವಾ ಇವರಿಗೇ ನಂಬಿಕೆಯಿಲ್ಲವೋ? ಬಂದ್‌ನ್ನು ಜನರೇ ಬೇಕಾದ ಹಾಗೆ ಖಂಡಿಸಿದ್ದರಲ್ಲ, ಸಾಲದಾಯಿತೆ?

ಈ ಮುಳ್ಳು ಬೆಳೆಸಿದವರಾರು ?

ಇದೆಲ್ಲ ಸರಿ. ಆದರೆ ಈ ಶಕ್ತಿಗಳನ್ನು ಮೊದಲು ಈವರೆಗೂ ಬೆಳೆಸಿದ್ದು ಯಾರು? ಅವರಲ್ಲಿ ಏನು ಅರ್ಹತೆ, ಸಾಮರ್ಥ್ಯ ಇತ್ತೆಂದು ಅವರನ್ನು ಬೆಳೆಸಿದರು. ಬೆಳೆಯಗೊಟ್ಟರು? ಜನ ಹೇಳುತ್ತಾರೆ —"ಈಗ ಅದೇ ಮುಳ್ಳು ಅವರ ಕಾಲಿಗೇ ಚುಚ್ಚುವುದಲ್ಲದೆ ಇಡೀ ಊರನ್ನೇ ಮುಳ್ಳಿನ ಮೇಲೆ ನಿಲ್ಲಿಸುವುದರಲ್ಲಿದ್ದರೆ ಅದನ್ನು ಕಿತ್ತು ಮುರಿಯುವ ನೈತಿಕ ಬಲ ಅವರಿಗೇ ಇಲ್ಲವೆನ್ನಿಸುತ್ತದೆ".

ವ್ಯಾಪಾರಿಗಳಿಗೊಂದು ಪ್ರಶ್ನೆ

ರಾಜಕೀಯ ಹಿತಾಸಕ್ತಿಯುಳ್ಳ ಮೂರ್ನಾಲ್ಕು ಅಂಗಡಿಗಳವರನ್ನು ಬಿಟ್ಟರೆ ಮತ್ತೆ ಇಡೀ ಊರಿನ ವ್ಯಾಪಾರಸ್ಥರು ಬಂದ್‌ನ್ನು ತೀವ್ರವಾಗಿ ಖಂಡಿಸಿದರು. '...
ತ್ತಿಲ್ಲದಿದ್ದರೆ ನಾಳೆ' ಪ್ರತೀಕಾರ ರೂಪವಾ...
ನಡೆಯಬಹುದಾದ ಗೂಂಡಾಗಿರಿಗೆ ಹೆ...
ಬಾಗಿಲು ಹಾಕಿದ್ದಾಗಿ ಎಲ್ಲರೂ ಹೇಳಿದ...
ಈಗ ಅವರುಗಳಿಗೇ ಒಂದು ಪ್ರಶ್ನೆ ಕೇಳ...
ಣ: ಇದೇ–ಒಂದು ಭಾನುವಾರ ಏನಾದರ...
ಬಂದ್‌ಗೆ ಕರೆ ಕೊಟ್ಟಿದ್ದರೆ ನೀವು ಹೀ...
ಹೆದರಿ ಬಂದ್ ಮಾಡುತ್ತಿದ್ದಿರಾ? ಇಲ್ಲ...
ದಾದರೆ, ಎಲ್ಲರೂ ಒಟ್ಟು ಸೇರಿ ಏನಾದರ...
ಪ್ರತಿ ಕ್ರಮ ತೆಗೆದುಕೊಳ್ಳುತ್ತಿದ್ದಿರೆಂ...
ದರೆ ಬೇರೆ ದಿನಗಳಲ್ಲೇಕೆ ಅದು ಸಾಧ್ಯವಿಲ್ಲ...
ನಿಮ್ಮ ಮನಸ್ಸುಗಳೊಳಗೂ ಕಪ್ಪು ಭ...
ಎಷ್ಟಿದೆ ಸ್ವಲ್ಪ ಇಣುಕಿ ನೋಡಿಕೊಳ್ಳಿ?

ಕೊಪ್ಪ ರೋಟರಿ ಅಧ್ಯಕ್ಷರಾ... ಮೊಹಮದ್ ಸಾದಿಕ್

ಕೊಪ್ಪ: ಇಲ್ಲಿನ ರೋಟರಿ ಕ್ಲಬ್...
ಅಧ್ಯಕ್ಷರಾಗಿ ಮೊಹಮದ್ ಸಾದಿಕ್ ಅ...
ಕೆ. ವಿಜಯ ಅಜಿಲರಿಂದ ಅಧಿಕಾರ ವ...
ಕೊಂಡರು. ನೂತನ ವರ್ಷದ ಪದಗ್ರ...
ಸಮಾರಂಭ ಈಚೆಗೆ ನಡೆಯಿತು. ತೀರ್ಥ...
ಯ ಡಾ|| ಟಿ. ನಾರಾಯಣಸ್ವಾಮಿ ಮ...
ನ.ರಾ.ಪುರದ ಎ. ಪಿ. ಗೋವಿಂದೇ ಗೌ...
ಮುಖ್ಯ ಅತಿಥಿಗಳಾಗಿದ್ದರು.

ಈ ಸಂದರ್ಭದಲ್ಲಿ ಕೊಪ್ಪ ತಾಲ್ಲೂಕಿ...
ಕಳೆದ ವರ್ಷ ಎಸ್ಸೆಸ್ಸೆಲ್ಸಿ ಮತ್ತು ಪಿಯು...
ಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ತ...
ಇಬ್ಬರಿಗೆ ಬಹುಮಾನಗಳನ್ನು ನೀಡ...
ಯಿತು.

ಪದಾಧಿಕಾರಿಗಳು

ಕಾರ್ಯದರ್ಶಿಯಾಗಿ ಕೆ. ಎಸ್. ಶಾಂ...
ರಾಂ ಪುನರಾಯ್ಕೆಯಾಗಿದ್ದಾರೆ. ಇತರರ...
ಎಲಿಯಾಸ್ ಡಯಾಸ್ (ಉಪಾಧ್ಯಕ್ಷ...
ಎ. ವಿ. ಪ್ರಸನ್ನ ಕುಮಾರ್ (ಖಜಾಂಚಿ...
ಪಾಸ್ಕಲ್ ಡಯಾಸ್, ಮಂಜುನಾಥಶೆ...
ಶ್ರೀನಿವಾಸ ನಾಯ್ಕ್, ಎಸ್. ಉಮೇ...
ಮತ್ತು ಎ. ಉಮೇಶ್.

ಛತ್ರದ ಶತಮಾನೋತ್ಸವ ಮಂದಿರ... ನಕ್ಷೆ, ಅಂದಾಜು ತಯಾರಿಸಲ... ಜಿಲ್ಲಾಧಿಕಾರಿಗಳ ಆದೇಶ

ಹರಿಹರಪುರ: ಇಲ್ಲಿಗೆ ಜು. 21 ರಂ...
ಬಂದಿದ್ದ ಜಿಲ್ಲಾಧಿಕಾರಿಗಳು ಮಲ್ಲೇಶ...
ನವರ ಧರ್ಮಛತ್ರಕ್ಕೂ ಭೇಟಿ ನೀಡಿ, ಆ...
ಳಿತ ಮಂಡಳಿ ಯೋಜಿಸಿರುವ ಶತಮಾನೋ...
ತ್ಸವ ಸ್ಮಾರಕ ವೆಂಕಟೇಶ್ ಮಂದಿರದ ನ...
ಮತ್ತು ಅಂದಾಜು ತಯಾರಿಸುವಂತೆ ತ...
ಸೀಲ್ದಾರರಿಗೆ ಸೂಚಿಸಿದರು. ಹಾಗೂ ಶಾ...
ಬಾಲಕ–ಬಾಲಕಿಯರ ಉಚಿತ ಊಟದ ...
ವಸ್ಥೆಯನ್ನೂ, ಸಂಸ್ಥೆಯ ಸಂಕ್ಷಿಪ್ತ ಇ...
ಹಾಸವನ್ನೂ ಪರಿಶೀಲಿಸಿದರು.

ಸ್ಟೈಪೆಂಡರಿಗಳ ಮನವಿ

ಶೃಂಗೇರಿ: ರಾಜ್ಯ ಸರ್ಕಾರದ ಸ್ಟೈ...
ಡಿಯರಿ ಪದವೀಧರರಿಗೆ ಅವರ ವಯೋಮಿ...
ಮೀರುವ ಮುನ್ನವೇ ಖಾಯಂ ಹುದ್ದೆ...
ನ್ನು ನೀಡಬೇಕೆಂದೂ ಇದಕ್ಕಾಗಿ ಸರ್ಕಾ...
ಅಧೀನದ ಕ.ವಿ.ಮಂಡಳಿ ಮತ್ತಿತರ ಕಾರ...
ರೇಶನ್‌ಗಳಲ್ಲಿ ಶೇ. 50ರ ಮೀಸಲಾತಿ ...
ಬೇಕೆಂದೂ ಶೃಂಗೇರಿ ತಾ|| ಸ್ಟೈಪೆಂಡರಿ...
ಸಂಘ ಸರ್ಕಾರಕ್ಕೆ ಮನವಿ ಮಾಡಿದೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್; ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.